ಜೆಎಸ್‌ಎಸ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ)
JSS COLLEGE OF ARTS, COMMERCE & SCIENCE (Autonomous)

ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ೧೦ನೇ ಪದವೀಧರರ ದಿನಾಚರಣೆ ಕಾರ್ಯಕ್ರಮದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳೊಂದಿಗೆ ನೀತಿ ಆಯೋಗದ ಹೆಚ್ಚುವರಿ ಕಾರ್ಯದರ್ಶಿ ಡಾ.ಆರ್.ರಮಣನ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಖ್ಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಪ್ರಾಂಶುಪಾಲ ಪ್ರೊ.ಎಂ.ಮಹದೇವಪ್ಪ, ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಟಿ.ಡಿ.ಸುಬ್ಬಣ್ಣ, ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶ್ರೀಮಠ ಮಲ್ಲಿಕಾರ್ಜುನ್, ಕಾಲೇಜಿನ ಮುಖ್ಯ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಬಿ.ಪ್ರಭುಸ್ವಾಮಿ ಚಿತ್ರದಲ್ಲಿದ್ದಾರೆ.

ನಿಧನ ವಾರ್ತೆ

ಆರ್.ಪಿ.ಜಗದೀಶ್ ತಾಯಿ ಗೌರಮ್ಮ

ಮೈಸೂರು,ಜ.೧೨–ಹಿರಿಯ ಪತ್ರಕರ್ತ ಹಾಗೂ ಮುಖ್ಯಮಂತ್ರಿಗಳ ಮಾಜಿ ಮಾಧ್ಯಮ ಸಲಹೆಗಾರ ಆರ್.ಪಿ.ಜಗದೀಶ್ ಅವರ ತಾಯಿ, ಶತಾಯುಷಿ ಗೌರಮ್ಮ(೧೦೬) ಶುಕ್ರವಾರ ನಿಧನರಾದರು. ಮೃತರು ವಿದ್ಯಾರಣ್ಯಪುರಂ ಬಡಾವಣೆಯಲ್ಲಿರುವ ತಮ್ಮ ಕಿರಿಯ ಮಗನ ಮನೆಯಲ್ಲಿ ವಾಸವಿದ್ದರು.

ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರಿನ ಆರ್.ಸಿ.ಪುಟ್ಟಬಸಪ್ಪ ಅವರ ಪತ್ನಿಯಾದ ಗೌರಮ್ಮ ಅವರಿಗೆ ನಾಲ್ವರು ಗಂಡು ಮಕ್ಕಳಿದ್ದು, ಇಬ್ಬರು ಹಿರಿಯ ಮಕ್ಕಳು ತೀರಿಕೊಂಡಿದ್ದಾರೆ. ಆರ್.ಪಿ.ಜಗದೀಶ್ ಹಾಗೂ ಅವರ ತಮ್ಮ ಆರ್.ಪಿ.ಸದಾಶಿವ ಇಬ್ಬರೂ ತಾಯಿಯ ಅಂತ್ಯ ಸಂಸ್ಕಾರವನ್ನು ಶುಕ್ರವಾರ ಸಂಜೆ ವಿದ್ಯಾರಣ್ಯಪುರಂ ರುದ್ರಭೂಮಿಯಲ್ಲಿ ನೆರವೇರಿಸಿದರು.

ಪತ್ರಕರ್ತ ಬಿ.ಎಸ್.ರವೀಂದ್ರನಾಥ್

ಮೈಸೂರು,ಜ.೧೨– ಹಿರಿಯ ಪತ್ರಕರ್ತ, ಸ್ಥಳೀಯ ಕನ್ನಡ ದೈನಿಕ 'ಅಶೋಕ' ಪತ್ರಿಕೆ ಸಂಪಾದಕ ಬಿ.ಎಸ್.ರವೀಂದ್ರನಾಥ್ (೭೩) ಶುಕ್ರವಾರ ಸಂಜೆ ಸ್ವಗೃಹದಲ್ಲಿ ನಿಧನರಾದರು.

ನಗರದ ಲಕ್ಷ್ಮಿ ವಿಲಾಸ ರಸ್ತೆಯಲ್ಲಿ ಮನೆ ಸಂಖ್ಯೆ ೨೮೦ರ ನಿವಾಸಿಯಾಗಿದ್ದ ರವೀಂದ್ರನಾಥ್ ಅವರು ದೀರ್ಘ ಕಾಲದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರು ಪತ್ನಿ ಭಾನಮತಿ, ಪುತ್ರಿಯರಾದ ಡಾ.ಮಧು, ಸ್ಮಿತಾ, ಶ್ರುತಿ ಅವರನ್ನು ಅಗಲಿದ್ದಾರೆ.

ಪುತ್ರಿ ಡಾ.ಮಧು ವಿದೇಶದಲ್ಲಿದ್ದು, ಅವರು ಬಂದ ನಂತರ ಶನಿವಾರ ಬೆಳಿಗ್ಗೆ ೧೦.೩೦ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪತ್ರಿಕೋದ್ಯಮದಲ್ಲಿ ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಬಿ.ಎಸ್.ರವೀಂದ್ರನಾಥ್ ಅವರು, ಮೈಸೂರು ನಗರ ಸಣ್ಣ ಪತ್ರಿಕೆಗಳ ಸಂಘದ ಕಾರ್ಯದರ್ಶಿಯಾಗಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯದರ್ಶಿಯಾಗಿ ಹಾಗೂ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಜೈನ ಸಮಾಜದ ಮುಖಂಡರಾಗಿದ್ದ ರವೀಂದ್ರನಾಥ ಅವರು, ಬಿಳಿಕೆರೆ ಗೊಮ್ಮಟಗಿರಿ ಶ್ರೀ ಕ್ಷೇತ್ರ ಸೇವಾ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ನಂದಕುಮಾರ್ ಹೇಳಿಕೆಗೆ ಆಕ್ಷೇಪ

ಮೈಸೂರು,ಜ.೧೨– ರಾಜ್ಯ ವಿಶ್ವಕರ್ಮ ನಿಗಮದ ಅಧ್ಯಕ್ಷ ನಂದಕುಮಾರ್ ಅವರು ಇಡೀ ವಿಶ್ವಕರ್ಮ ಸಮಾಜ ಕಾಂಗ್ರೆಸ್ ಬೆಂಬಲಿತ ಎಂಬಂತೆ ಹೇಳಿಕೆ ನೀಡಿರುವುದು ಸರಿಯಲ್ಲ. ವಿಶ್ವಕರ್ಮ ಸಮಾಜ ಯಾವುದೇ ಒಂದು ಪಕ್ಷದ ಆಸ್ತಿಯಲ್ಲ. ಜನಾಂಗ ಯಾವುದೇ ಒಂದು ಪಕ್ಷವನ್ನು ಬೆಂಬಲಿಸುತ್ತಿಲ್ಲ. ತಮ್ಮ ಸ್ವಾರ್ಥಕ್ಕಾಗಿ ಜನಾಂಗವನ್ನು ಬಲಿ ಕೊಡುವ ಪ್ರಯತ್ನ ಮಾಡಬಾರದು ಎಂದು ವಿಶ್ವಕರ್ಮ ಸಮಾಜದ ಯುವ ಮುಖಂಡ ಕಲ್ಲಂಬಾಳು ಸುಂದರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನ್ಯಾ. ಲೋಯಾ ಸಂಶಯಾಸ್ಪದ ಸಾವು ಪ್ರಕರಣ

ಪ್ರಧಾನಿ ರಾಜೀನಾಮೆಗೆ ಆಗ್ರಹಿಸಿ ೨೧ರಂದು ಪ್ರತಿಭಟನೆ

> ಲೋಯಾ ಅವರ ಮನೆಗೆ ಮೃತದೇಹ ತಂದಾಗ ಅವರ ಶರ್ಟಿನಲ್ಲಿ ರಕ್ತದ ಕಲೆಗಳಿದ್ದವು. ಇಂತಹ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಆದ್ದರಿಂದ ಲೋಯಾ ಸಾವಿನ ತನಿಖೆಯನ್ನು ಸರ್ವೋಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರಿಂದ ನಡೆಸಬೇಕು.
>
> -**ಪ್ರೊ.ಶಬ್ಬೀರ್ ಮುಸ್ತಫಾ,** ಚಿಂತಕ.

ಮೈಸೂರು,ಜ.೧೨– ಮುಂಬೈನ ವಿಶೇಷ ಸಿಬಿಐ ನ್ಯಾಯಾಲಯದ ನ್ಯಾಯಾಧೀಶ ಬ್ರಿಜ್‌ಶರಣ್ ಹರಕಿಶನ್ ಲೋಯಾ ಅವರ ಸಂಶಯಾಸ್ಪದ ಸಾವಿನ ತನಿಖೆ ಮುಗಿಯುವವರೆಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಜ.೨೧ರಂದು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡ ಜೋಗನಹಳ್ಳಿ ಗುರುಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ ೧೧ ಗಂಟೆಗೆ ಗನ್‌ಹೌಸ್ ಸಮೀಪವಿರುವ ಕುವೆಂಪು ಉದ್ಯಾನದಲ್ಲಿ ರೈತ, ದಲಿತ ಸಂಘಟನೆಗಳು, ಕನ್ನಡಪರ ಹೋರಾಟದ ಸಂಘಟನೆಗಳು, ಕಮ್ಯುನಿಸ್ಟ್ ಸಂಘಟನೆಗಳು, ಸಾಹಿತಿಗಳು, ಪ್ರಗತಿಪರರು, ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯವರು ಸಭೆ ಸೇರಿ, ಅಲ್ಲಿಂದ ವಿವಿಧ ರಸ್ತೆಯಲ್ಲಿ ಸಾಗಿ ಜಿಲ್ಲಾಧಿಕಾರಿಗಳ ಕಚೇರಿ ತಲುಪಿ ಅಲ್ಲಿ ಮನವಿ ಸಲ್ಲಿಸಲಾಗುವುದು ಎಂದರು.

೨೦೧೪ರ ನ.೩೦ರಂದು ನ್ಯಾ.ಬ್ರಿಜ್‌ಶರಣ್ ಹರಕಿಶನ್ ಲೋಯಾ ಅವರು ಗುಜರಾತ್‌ನಲ್ಲಿ ಸೊಹ್ರಾಬುದ್ದೀನ್ ಶೇಖ್ ಎನ್‌ಕೌಂಟರ್ ಪ್ರಕರಣದ ವಿಚಾರಣೆ ನಡೆಸುತ್ತಿದ್ದರು. ಲೋಯಾ ಅವರಿಗೆ ದೂರು ಮುಚ್ಚಿ ಹಾಕಲು ನೂರು ಕೋಟಿ ರೂ. ಆಮಿಷ ಒಡ್ಡಲಾಯಿತು. ಆದರೆ, ಅವರು ಅದಕ್ಕೆ ಒಪ್ಪಿರಲಿಲ್ಲ. ಅವರನ್ನು ಇಬ್ಬರು ಸಹೋದ್ಯೋಗಿಗಳು ಒಬ್ಬರ ಮನೆಯ ಮದುವೆಗೆ ಬಲವಂತವಾಗಿ ನಾಗಪುರಕ್ಕೆ ಕರೆದುಕೊಂಡು ಹೋಗಿದ್ದರು. ಅವರು ಅಲ್ಲಿ ಸರ್ಕಾರಿ ವಿಐಪಿ ಅತಿಥಿಗೃಹದಲ್ಲಿ ಸಂಶಯಾಸ್ಪದ ರೀತಿಯಲ್ಲಿ ಸಾವಿಗೀಡಾಗಿದ್ದರು.

ಈ ಬಗ್ಗೆ ಪತ್ರಕರ್ತ ಟಾಕ್ಸೆ ಎಂಬವರು ಒಂದು ವರ್ಷ ತನಿಖೆ ನಡೆಸಿ ದಿ ಕಾರ್‌ವಾನ್ ಪತ್ರಿಕೆಯಲ್ಲಿ ತನಿಖಾ ವರದಿ ಪ್ರಕಟಿಸಿದ್ದಾರೆ. ಅಂದು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಮೋದಿ ಮತ್ತು ಗೃಹ ಸಚಿವರಾಗಿದ್ದ ಅಮಿತ್ ಶಾ ಅವರು ತನಿಖೆ ಮುಗಿಯುವವರೆಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಮತ್ತು ಲೋಯಾ ಸಾವಿನ ಬಗ್ಗೆ ತನಿಖೆ ನಡೆಸಬೇಕೆಂದು ಹೋರಾಟ ನಡೆಸಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು. ಚಿಂತಕ ಪ್ರೊ.ಶಬ್ಬೀರ್ ಮುಸ್ತಫಾ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ದ.ಆಫ್ರಿಕಾ ವಿರುದ್ಧ ಎರಡನೇ ಟೆಸ್ಟ್

ಸೆಂಚೂರಿಯನ್,ಜ.೧೨– ಮೊದಲ ಟೆಸ್ಟ್‌ನಲ್ಲಿ ಸೋಲಿನ ಕಹಿ ಉಂಡಿರುವ ಭಾರತ ತಂಡ ದಕ್ಷಿಣ ಆಫ್ರಿಕಾ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ಕೆಲವು ಬದಲಾವಣೆ ಮಾಡಿಕೊಂಡು ಕಣಕ್ಕಿಳಿಯಲಿದೆ.

ಮೊದಲ ಟೆಸ್ಟ್ ಪಂದ್ಯದಲ್ಲಿ ಆರಂಭಿಕ ಆಟಗಾರ ಶಿಖರ್ ಧವನ್ ವೈಫಲ್ಯದಿಂದಾಗಿ ಅವರ ಜಾಗದಲ್ಲಿ ಕನ್ನಡಿಗ ಕೆ.ಎಲ್.ರಾಹುಲ್ ಆಡುವುದು ಬಹುತೇಕ ಖಚಿತವಾಗಿದೆ.

ಇನ್ನು ರೋಹಿತ್ ಶರ್ಮಾಗೆ ಮತ್ತೊಂದು ಅವಕಾಶ ಸಿಕ್ಕಿದ್ದು ಎರಡನೇ ಪಂದ್ಯದಲ್ಲಿ ಆಡಲಿದ್ದಾರೆ ಎಂದು ತಿಳಿದುಬಂದಿದೆ. ಹೀಗಾಗಿ ಅಜಿಂಕ್ಯ ರಹಾನೆಗೆ ಸ್ಥಾನ ಸಿಗುವುದು ಅನುಮಾನ ಎನ್ನಲಾಗಿದೆ. ಸೆಂಚೂರಿಯನ್ ಪಿಚ್ ವೇಗ ಮತ್ತು ಸ್ವಿಂಗ್ ಬೌಲಿಂಗ್‌ಗೆ ಪೂರಕವಾಗಿದ್ದು, ೪ ಮಂದಿ ವೇಗದ ಬೌಲರ್‌ಗಳನ್ನು ಕಣಕ್ಕಿಳಿಸಲು ಎರಡೂ ತಂಡಗಳು ಉತ್ಸುಕವಾಗಿವೆ.

ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಭಾರತ ೩ ಪಂದ್ಯಗಳ ಸರಣಿ ಜೀವಂತವಾಗಿರಿಸಲು ಈ ಪಂದ್ಯವನ್ನು ಗೆಲ್ಲಲೇಬೇಕಿದೆ.

ಪಂದ್ಯ ಆರಂಭ ವಾಗುವ ಸಮಯ:
ಮಧ್ಯಾಹ್ನ ೨ ಗಂಟೆ
ನೇರ ಪ್ರಸಾರ:
ಟೆನ್ ಸ್ಪೋರ್ಟ್ಸ್ ನೆಟ್‌ವರ್ಕ್

ದೇಶ /ವಿದೇಶ

ಕೋಳಿಗೆ ಹಕ್ಕಿಜ್ವರ ಇಲ್ಲ: ಮಂಜು

ಬೆಂಗಳೂರು,ಜ.೧೨– ಕೋಳಿಗೆ ಜ್ವರ ಬಂದರೆ ಹಕ್ಕಿ ಜ್ವರವಲ್ಲ. ಹೀಗಾಗಿ ಕೋಳಿ ಮಾಂಸ ತಿಂದರೆ ಯಾವುದೇ ರೀತಿಯ ತೊಂದರೆ ಇಲ್ಲ ಎಂದು ಪಶು ಸಂಗೋಪನೆ ಸಚಿವ ಎ.ಮಂಜು ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕೆಲ ಭಾಗಗಳಲ್ಲಿ ಕೋಳಿಗಳಿಗೆ ಕಾಣಿಸಿಕೊಂಡ ಜ್ವರವನ್ನು ತಜ್ಞ ವೈದ್ಯರು ಪರಿಶೀಲನೆ ಮಾಡಿದ್ದಾರೆ. ಪರಿಶೀಲನೆ ನಂತರ ಮಧ್ಯಪ್ರದೇಶದ ಭೂಪಾಲ್‌ನ ಸಂಶೋಧನಾ ಹಾಗೂ ಪ್ರಯೋಗಾಲಯ ಕೇಂದ್ರಕ್ಕೆ ವರದಿ ಕಳುಹಿಸಲಾಗಿತ್ತು. ಈಗ ಅಲ್ಲಿಂದ ವರದಿ ಬಂದಿದ್ದು ಇದು ಕೋಳಿ ಜ್ವರ. ಹಕ್ಕಿ ಜ್ವರದ ಸೋಂಕಲ್ಲ ಎಂದು ಹೇಳಿದೆ ಎಂದು ಸ್ಪಷ್ಟಪಡಿಸಿದರು.

ಒಂದಿಂಚೂ ಭೂಮಿ ನೀಡುವುದಿಲ್ಲ: ನಿತಿನ್ ಗಡ್ಕರಿ

ಮುಂಬೈ,ಜ.೧೨– ಪಾಕಿಸ್ತಾನದ ಗಡಿ ಪ್ರದೇಶದಲ್ಲಿರುವ ನೌಕಾಪಡೆಯ ಸಿಬ್ಬಂದಿಯೂ ದಕ್ಷಿಣ ಮುಂಬೈನಲ್ಲಿ ನೆಲೆಸಲು ಬಯಸುತ್ತಿದ್ದಾರೆ ಎಂಬುದರ ಬಗ್ಗೆ ಆಶ್ಚರ್ಯಪಟ್ಟಿರುವ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ದಕ್ಷಿಣ ಮುಂಬೈನಲ್ಲಿ ನೌಕಾಪಡೆಯ ವಸತಿಗೃಹ ನಿರ್ಮಾಣಕ್ಕೆ ಒಂದಿಂಚೂ ಭೂಮಿ ನೀಡುವುದಿಲ್ಲ ಎಂದಿದ್ದಾರೆ.

ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಗಡ್ಕರಿ, ದಕ್ಷಿಣ ಮುಂಬೈಯ ಮಲಬಾರ್ ಹಿಲ್‌ನ ತೇಲುವ ಸೇತುವೆ ಯೋಜನೆಗೆ ನೌಕಾಪಡೆಯ ಆಕ್ಷೇಪಣೆಗೆ ಅಸಮಾಧಾನ ವ್ಯಕ್ತಪಡಿಸಿದರು. ವಾಸ್ತವವಾಗಿ ಉಗ್ರರು ನುಸುಳುತ್ತಿರುವ ಗಡಿಯಲ್ಲಿ ನೌಕಾಪಡೆಯ ಅಗತ್ಯವಿದೆ. ಎಲ್ಲರೂ(ನೌಕಾಪಡೆ ಸಿಬ್ಬಂದಿ) ಏಕೆ ದಕ್ಷಿಣ ಮುಂಬೈನಲ್ಲಿ ನೆಲೆಸಲು ಬಯಸುತ್ತೀರಿ? ಅವರು(ನೌಕಾಪಡೆ) ಭೂಮಿ ನೀಡುವಂತೆ ಕೇಳುತ್ತಿದ್ದಾರೆ. ಇನ್ನು ಒಂದಿಂಚೂ ಭೂಮಿಯನ್ನು ನೀಡಲಾಗುವುದಿಲ್ಲ. ದಯವಿಟ್ಟು ನನ್ನ ಬಳಿಗೆ ಮತ್ತೆ ಬರಬೇಡಿ ಎಂದು ಗಡ್ಕರಿ ಹೇಳಿದ್ದಾರೆ.

ವೇಶ್ಯಾವಾಟಿಕೆಗೆ ತಳ್ಳಲು ಯತ್ನ: ದೂರು ದಾಖಲು

ತಿರುವನಂತಪುರಂ,ಜ.೧೨– ಸಿರಿಯಾದಲ್ಲಿ ಐಸಿಸ್ ಉಗ್ರರಿಗಾಗಿ ಮಹಿಳೆಯೊಬ್ಬರನ್ನು ವೇಶ್ಯಾವಾಟಿಕೆಗೆ ತಳ್ಳಲು ಯತ್ನಿಸಿದ ಪ್ರಕರಣ ವರದಿಯಾಗಿದೆ.

ಸಿರಿಯಾದಲ್ಲಿರುವ ಐಸಿಸ್ ಉಗ್ರರ ಲೈಂಗಿಕ ತೃಷೆ ತೀರಿಸಿಕೊಳ್ಳಲು ಈಕೆಯನ್ನು ಮಾರಾಟ ಮಾಡಲು ಯತ್ನಿಸಿದ್ದ. ಇದಕ್ಕಾಗಿ ಆಕೆಯನ್ನು ಮುಸ್ಲಿಂ ಆಗಿ ಮತಾಂತರ ಮಾಡಿದ್ದ. ಈ ಬಗ್ಗೆ ಕೇರಳದ ಎರ್ನಾಕುಲಂ ಮೂಲದ ಮಹಿಳೆ ತನ್ನ ಪತಿ ಮೊಹಮದ್ ರಿಯಾಜ್ ವಿರುದ್ಧವೇ ದೂರು ದಾಖಲಿಸಿದ್ದಾರೆ. ಈಕೆಯ ದೂರಿನ ಮೇರೆಗೆ ಫವಾಜ್ ಜಮಾಲ್, ಮೊಹಮದ್ ಸಿಯಾದ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

ಶೌಚಾಲಯದ ಗೋಡೆಗಳಿಗೆ ಕೇಸರಿ

ಕಾನ್ಪುರ್,ಜ.೧೨– ಉತ್ತರಪ್ರದೇಶದಲ್ಲಿ ಕೇಸರಿ ಬಣ್ಣ ಹೆಚ್ಚು ಪ್ರಚಲಿತಕ್ಕೆ ಬರುತ್ತಿದ್ದು, ಇದಕ್ಕೆ ನೇರ ನಿದರ್ಶನ ಎಂಬಂತೆ ಇತ್ತೀಚೆಗೆ ನಿರ್ಮಿಸಲ್ಪಟ್ಟ ಸಮುದಾಯ ಶೌಚಾಲಯದ ಗೋಡೆಗಳಿಗೂ ಕೇಸರಿ ಬಣ್ಣ ಬಳಿಯಲಾಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉತ್ತರ ಪ್ರದೇಶದಲ್ಲಿ ಆಡಳಿತ ಆರಂಭಿಸಿದ ಬಳಿಕ ಹಲವಾರು ಬದಲಾವಣೆಗಳು ಕಾಣುತ್ತಲೇ ಇವೆ. ಇತ್ತೀಚೆಗಷ್ಟೇ ಸರ್ಕಾರಿ ಕಚೇರಿ ಸಂಕೀರ್ಣಗಳು, ಲಖನೌನ ಪೊಲೀಸ್ ಠಾಣೆ, ಮತ್ತು ಗೋರಖ್‌ಪುರದ ದೊಡ್ಡ ಗಡಿಯಾರದ ಕಂಬಕ್ಕೆ ಕೇಸರಿ ಬಳಿದ ಬಳಿಕ ಇದೀಗ ನೂತನವಾಗಿ ನಿರ್ಮಿತಗೊಂಡಿರುವ ೧೦೦ ಶೌಚಾಲಯಗಳ ಗೋಡೆಗೆ ಕೇಸರಿ ಬಳಿಯಲಾಗಿದೆ.

ಗ್ರಾಮಸ್ಥರು ಕೂಡ ಈ ನಡೆಯನ್ನು ಸ್ವಾಗತಿಸಿದ್ದು, ಸಮುದಾಯ ಶೌಚಾಲಯಕ್ಕೆ ಬಣ್ಣ ಬಳಿಯುವ ಕುರಿತು ಈ ವರ್ಷದ ಆರಂಭದಲ್ಲೇ ಗ್ರಾಮಸ್ಥರಿಗೆ ಮಾಹಿತಿ ರವಾನಿಸಿದ್ದೆವು. ಅವರೆಲ್ಲರ ಒಮ್ಮತದೊಂದಿಗೆ ಈ ಬಣ್ಣ ಬಳಿಯಲಾಗಿದೆ. ಇದನ್ನು ನಕಾರಾತ್ಮಕವಾಗಿ ನೋಡುವುದು ತಪ್ಪು' ಎಂದು ಗ್ರಾಮ ಮುಖ್ಯಸ್ಥ ವೇದ್‌ಪಾಲ್ ಸಿಂಗ್ ಹೇಳಿದ್ದಾರೆ.

ಇಂದಿನ ಕಾರ್ಯಕ್ರಮಗಳು...

- **ಬ್ಯಾಡ್ಮಿಂಟನ್ ಪಂದ್ಯಾವಳಿ**

ಬೆಳಿಗ್ಗೆ ೮ಕ್ಕೆ, ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್, ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ ಅಂಗವಾಗಿ ಬ್ಯಾಡ್ಮಿಂಟನ್ ಪಂದ್ಯಾವಳಿ ಹಾಗೂ ಸೈಕಲ್ ಜಾಥಾ, ಉಪಸ್ಥಿತಿ–ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಆತ್ಮಜ್ಞಾನಾನಂದಜಿ, ಅಧ್ಯಕ್ಷತೆ–ಶಾಸಕ ವಾಸು, ಉದ್ಘಾಟನೆ–ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಿ. ಧ್ರುವಕುಮಾರ್, ಚಾಲನೆ–ಮಹಾನಗರ ಪಾಲಿಕೆಯ ಆಯುಕ್ತ ಜಿ. ಜಗದೀಶ್ ಸ್ಥಳ: ಮುಡಾ ಒಳಾಂಗಣ ಕ್ರೀಡಾಂಗಣ, ವಿಜಯನಗರ ೨ನೇ ಹಂತ.

- **ವಾರ್ಷಿಕ ಕ್ರೀಡಾದಿನ**

ಬೆಳಿಗ್ಗೆ ೯ಕ್ಕೆ, ವಿದ್ಯಾ ವಿಕಾಸ ಪ್ರಾಥಮಿಕ ಮತ್ತು ಪ್ರೌಢಶಾಲೆ, ಮುಖ್ಯ ಅತಿಥಿಗಳು–ಅರ್ಜುನ ಪ್ರಶಸ್ತಿ ವಿಜೇತ ಗಿರೀಶ್ ಹೊಸನಗರ ನಾಗರಾಜೇ ಗೌಡ, ಅಧ್ಯಕ್ಷತೆ–ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿ. ಕವೀಶ್‌ಗೌಡ, ಸ್ಥಳ: ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಕ್ರೀಡಾ ಮೈದಾನ, ನಾಡನಹಳ್ಳಿ, ಬನ್ನೂರು ರಸ್ತೆ.

- **ವಾಕಥಾನ್**

ಬೆಳಿಗ್ಗೆ ೯.೪೫ಕ್ಕೆ, ಪೋದಾರ್ ಜಂಬೂ ಕಿಡ್ಸ್, 'ಕರ್ತವ್ಯ– ಎ ವಾಕ್ ಆನ್ ರೋಡ್ ಸೇಫ್ಟಿ', ಚಾಲನೆ–ಹೆಬ್ಬಾಳು ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ತಿಮ್ಮೇಗೌಡ, ಸ್ಥಳ: ಹೆಬ್ಬಾಳು ೨ನೇ ಹಂತ.

- **ಚಿತ್ರಗೀತಾ ಗಾಯನ ಸ್ಪರ್ಧೆ**

ಬೆಳಿಗ್ಗೆ ೧೦ಕ್ಕೆ, ರೋಟರಿ ಐವರಿ ವಾಯ್ಸ್ ಆಫ್ ಮೈಸೂರು, ಸ್ಥಳ: ಮಹಾಜನ ವಿದ್ಯಾಸಂಸ್ಥೆ, ಜಯಲಕ್ಷ್ಮಿಪುರಂ.

- **ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮ**

ಬೆಳಿಗ್ಗೆ ೧೦.೩೦ಕ್ಕೆ, ವಿದ್ಯಾವರ್ಧಕ ಸಂಘ, ಶ್ರೀ ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಮತ್ತು ಪ್ರೌಢಶಾಲೆ, ಮುಖ್ಯ ಅತಿಥಿ–ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಮುಖ್ಯ ಭಾಷಣ–ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಉಪನ್ಯಾಸಕ ಎಸ್.ಎಸ್. ರಮೇಶ್, ಅಧ್ಯಕ್ಷತೆ–ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ವಿ.ವಿ.ಸಿ.ಇ. ಆವರಣ, ಗೋಕುಲಂ ೩ನೇ ಹಂತ.

- **ಸಂಕ್ರಾಂತಿ ಹಬ್ಬ ಆಚರಣೆ**

ಬೆಳಿಗ್ಗೆ ೧೧ಕ್ಕೆ, ಪಾತಿ ಫೌಂಡೇಶನ್, ಸ್ಥಳ: ಶಕ್ತಿಧಾಮ, ಬಿ.ಎನ್. ರಸ್ತೆ.

- **ಸಾಧಕರೊಂದಿಗೆ ಸಂವಾದ**

ಬೆಳಿಗ್ಗೆ ೧೧ಕ್ಕೆ, ಮೈಸೂರು ಆರ್ಟ್ ಗ್ಯಾಲರಿ, ಪ್ರಾಸ್ತಾವಿಕ ಭಾಷಣ–ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಮುಖ್ಯ ಅತಿಥಿ–ಸಾಹಿತಿ ಪ್ರೊ. ಮಳಲಿ ವಸಂತಕುಮಾರ್, ಸ್ಥಳ–ಮೈಸೂರು ಆರ್ಟ್ ಗ್ಯಾಲರಿ, ೧೨ನೇ ಕ್ರಾಸ್, ರಾಮಾನುಜ ರಸ್ತೆ.

- **ಲ್ಯಾಪ್‌ಟಾಪ್ ವಿತರಣೆ**

ಬೆಳಿಗ್ಗೆ ೧೧ಕ್ಕೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ–ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಅಧ್ಯಕ್ಷತೆ–ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿ–ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಪ್ರೊ. ಜೆ. ಪೂರ್ಣಚಂದ್ರ ತೇಜಸ್ವಿ, ಸ್ಥಳ–ಕಾಲೇಜಿನ ಆವರಣ, ಕುವೆಂಪುನಗರ.

- **ಸಾಂಸ್ಕೃತಿಕ ಕಾರ್ಯಕ್ರಮ**

ಬೆಳಿಗ್ಗೆ ೧೧ಕ್ಕೆ, ಸ್ವದೇಶಿ ಜಾಗರಣ ಮಂಚ್, ಸ್ವದೇಶಿ ಮೇಳ, ಬೆಳಿಗ್ಗೆ ೧೧ಕ್ಕೆ, ಹಾಡುಗಾರಿಕೆ ಸ್ಪರ್ಧೆ, ಮಧ್ಯಾಹ್ನ ೧.೩೦ಕ್ಕೆ, ಉಪನ್ಯಾಸ–ಡಾ. ಖಾದರ್, ವಿಷಯ–ಶುಗರ್‌ಲೆಸ್ ದುನಿಯಾ, ೨.೩೦ಕ್ಕೆ, ಚಿತ್ರಕಲೆ ಸ್ಪರ್ಧೆ, ಸಂಜೆ ೫.೩೦ಕ್ಕೆ, ಪ್ಲಾಸ್ಟಿಕ್ ಭೂತ ನಾಟಕ ಪ್ರದರ್ಶನ–ಗೋಪಾಲಸ್ವಾಮಿ ಶಾಲಾ ವಿದ್ಯಾರ್ಥಿಗಳು, ೬.೩೦ಕ್ಕೆ, ಉಪನ್ಯಾಸ–ಡಾ. ಜಯಪ್ರಕಾಶ್ ವಿಷಯ–ನಮ್ಮ ಹೆಮ್ಮೆಯ ಭಾರತ, ಸ್ಥಳ: ಮಹಾರಾಜ ಕಾಲೇಜು ಮೈದಾನ.

- **ಪುಸ್ತಕ ಬಿಡುಗಡೆ**

ಬೆಳಿಗ್ಗೆ ೧೧.೩೦ಕ್ಕೆ, ಎಚ್. ವಿ. ರಾಜೀವ್ ಸ್ನೇಹ ಬಳಗ, ಎಚ್.ವಿ. ರಾಜೀವ್‌ರವರ ಪರಿಚಯ ಪುಸ್ತಕ ಬಿಡುಗಡೆ–ಮಾಜಿ ಸಚಿವ ವಿ. ಶ್ರೀನಿವಾಸ ಪ್ರಸಾದ್, ಉಪಸ್ಥಿತಿ– ಬಿಜೆಪಿ ನಗರಾಧ್ಯಕ್ಷ ಡಾ. ಬಿ.ಎಚ್.ಮಂಜುನಾಥ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಎಚ್. ವಿ. ರಾಜೀವ್, ಸ್ಥಳ: ಕಿಂಗ್ಸ್ ಕೋರ್ಟ್ ಹೋಟೆಲ್, ಜೆಎಲ್‌ಬಿ ರಸ್ತೆ.

- **ತೃತೀಯ ವರ್ಷದ ವಾರ್ಷಿಕೋತ್ಸವ ಸಮಾರಂಭ**

ಮಧ್ಯಾಹ್ನ ೨ಕ್ಕೆ, ಬಿ.ಜಿ.ಎಸ್. ಒಕ್ಕಲಿಗ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ, ಉದ್ಘಾಟನೆ–ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಪ್ರಸನ್ನ ಎನ್. ಗೌಡ, ಅಧ್ಯಕ್ಷತೆ–ತೋಟಗಾರಿಕೆ ಇಲಾಖೆಯ ವಿಶ್ರಾಂತ ನಿರ್ದೇಶಕ ಪಿ.ಎಂ. ರಾಮು, ಮುಖ್ಯ ಅತಿಥಿ–ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕಿ ಪಿ. ಶಾರದಮ್ಮ, ಸ್ಥಳ–ನೇಗಿಲಯೋಗಿ ಮರುಳೇಶ್ವರ ಸೇವಾಭವನ, ಹೊಸ ಕೋರ್ಟ್ ಕಟ್ಟಡದ ಎದುರು, ಕೆ.ಜಿ.ಕೊಪ್ಪಲು.

ಟೆನ್ನಿಸ್‌ಬಾಲ್ ಕ್ರಿಕೆಟ್ ಪಂದ್ಯಾವಳಿ

ಬೆಳಿಗ್ಗೆ ೯.೩೦ಕ್ಕೆ, ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ವಾಲ್ಮೀಕಿ, ಕನಕ, ಕುವೆಂಪು ಜಯಂತಿ ಹಾಗೂ ರಾಜಶೇಖರ ಕೋಟಿ ಸ್ಮರಣಾರ್ಥ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ, ಪುಷ್ಪಾರ್ಚನೆ–ಪೊಲೀಸ್ ಆಯುಕ್ತ ಡಾ. ಎ. ಸುಬ್ರಮಣ್ಯೇಶ್ವರ ರಾವ್, ಮುಖ್ಯ ಅತಿಥಿಗಳು–ಉಪ ಪೊಲೀಸ್ ಆಯುಕ್ತ ಎನ್. ವಿಷ್ಣುವರ್ಧನ್, ಮೈಸೂರು ವಿವಿಯ ಕುಲಸಚಿವೆ ಡಿ. ಭಾರತಿ, ಜಿಲ್ಲಾ ಪಂಚಾಯಿತಿ ಸದಸ್ಯ ಬೀರಿಹುಂಡಿ ಬಸವಣ್ಣ, 'ಆಂದೋಲನ' ದಿನಪತ್ರಿಕೆಯ ಸಂಪಾದಕ ರವಿ ಕೋಟಿ, ಸ್ಥಳ: ವಿಲೇಜ್ ಹಾಸ್ಟೆಲ್ ಮೈದಾನ, ಮಾನಸ ಗಂಗೋತ್ರಿ.

- **ವಾರ್ಷಿಕೋತ್ಸವ**

ಸಂಜೆ ೫ಕ್ಕೆ, ಶ್ರೀ ರಾಮಕೃಷ್ಣ ಆಶ್ರಮ, ವಿವೇಕ ಶಿಕ್ಷಣ, ಮುಖ್ಯ ಅತಿಥಿ–ಡಾ. ಸುರೇಂದ್ರ ರಾಜ, ಡಾ. ಅಮಿತಾ ಸುರೇಂದ್ರ ರಾಜಾ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ.

- **ಜ್ಞಾನೋತ್ಸವ**

ಸಂಜೆ ೫.೩೦ಕ್ಕೆ, ಜ್ಞಾನೋದಯ ವಿದ್ಯಾಸಂಸ್ಥೆ, ೧೦ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿ–ಸಿಎಫ್‌ಟಿಆರ್‌ಐ ವಿಜ್ಞಾನಿ ಎ. ಶ್ರೀನಿವಾಸ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕಿ ರೆಜಿನಾ ಪಿ.ಮಾಲಾಕಿ, ಎಂಡಿಎಸ್‌ನ ಕಾರ್ಯದರ್ಶಿ ಡಾ. ಎಸ್. ರಾಜೇಂದ್ರ, ಸ್ಥಳ: ಜ್ಞಾನೋದಯ ಪಬ್ಲಿಕ್ ಸ್ಕೂಲ್, ಎಂಐಟಿ ಕಾಲೇಜು ಹತ್ತಿರ, ಬೆಳವಾಡಿ.

- **ಖೋ-ಖೋ ಪಂದ್ಯಾವಳಿ ಉದ್ಘಾಟನಾ ಸಮಾರಂಭ**

ಸಂಜೆ ೬ಕ್ಕೆ, ಎಕ್ಸಲೆಂಟ್ ಕ್ರೀಡಾ ಸಂಸ್ಥೆ, ಮೈಸೂರು ಮತ್ತು ರಾಜ್ಯ ಜಿಲ್ಲಾ ಖೋ–ಖೋ ಸಂಸ್ಥೆ, ರಾಜ್ಯ ಮಟ್ಟದ ಪುರುಷ ಮತ್ತು ಮಹಿಳೆಯರ ಆಹ್ವಾನಿತ ಖೋ–ಖೋ ಪಂದ್ಯಾವಳಿ, ಉದ್ಘಾಟನೆ–ಶಾಸಕ ವಾಸು, ಅಧ್ಯಕ್ಷತೆ– ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮುಖ್ಯ ಅತಿಥಿ–ನಗರಪಾಲಿಕೆಯ ಸದಸ್ಯ ಶಿವಮಾದು, ಅಭ್ಯುದಯ ಸಂಘದ ಕಾರ್ಯದರ್ಶಿ ಶಿವಕುಮಾರ್. ಸ್ಥಳ: ಕೆಂಪೇಗೌಡ ಕ್ರೀಡಾಂಗಣ, ಕುಂಬಾರ ಕೊಪ್ಪಲು.

- **ಸಂಗೀತ ಸ್ಪರ್ಧೆ**

ಸಂಜೆ ೬ಕ್ಕೆ, ಶ್ರೀ ಕೃಷ್ಣಗಾನ ಸಭಾ, ಸ್ಥಳ: ಶ್ರೀ ಕೃಷ್ಣ ದೇವಸ್ಥಾನದ ಆಳ್ವಾರ್ ಕಲಾಭವನ, ಗೋಕುಲಂ ೩ನೇ ಹಂತ.

- **ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ**

ಬೆಳಿಗ್ಗೆ ೬.೩೦ಕ್ಕೆ, ಸ್ವರಸಂಕುಲ ಸಂಗೀತ ಸಭಾ, ಗಾಯನ–ನ್ಯೂಯಾರ್ಕ್‌ನ ಪಂ. ಸಮರ್ಥ್ ನಗರ್ಕರ್, ತಬಲಾ–ಬೆಂಗಳೂರಿನ ಪಂ.ಸಾಗರ್ ಭರತ್‌ರಾಜ್, ಹಾರ್ಮೋನಿಯಂ–ಮೈಸೂರಿನ ವೀರಭದ್ರಯ್ಯ ಹಿರೇಮಠ, ಸ್ಥಳ– ಕೆ. ವಾಸುದೇವಾಚಾರ್ಯ ಭವನ, ನಾದಬ್ರಹ್ಮ ಸಂಗೀತ ಸಭಾ ಜೆಎಲ್‌ಬಿ ರಸ್ತೆ.

ಸುತ್ತೂರು ಜಾತ್ರೆಯಲ್ಲಿಂದು

- **ಸುತ್ತೂರು ಜಾತ್ರಾ ಮಹೋತ್ಸವ**

ಬೆಳಿಗ್ಗೆ ೧೦.೩೦ಕ್ಕೆ, ಜೆಎಸ್‌ಎಸ್ ಸುತ್ತೂರು ಜಾತ್ರಾ ಮಹೋತ್ಸವ, ಸಾಂಸ್ಕೃತಿಕ ಮೇಳ, ಮಾಹಿತಿ ಕೇಂದ್ರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ, ಉದ್ಘಾಟನೆ: ಉಪಸ್ಥಿತಿ–ಶಿವಮೊಗ್ಗ ಬಸವ ಕೇಂದ್ರದ ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು, ಸುಕ್ಷೇತ್ರ ಕಂಬಹಳ್ಳಿಯ ಜೈನ ಮಠದ ಸ್ವಸ್ತಿ ಶ್ರೀ ಭಾನುಕೀರ್ತಿ ಭಟ್ಟಾರಕ ಸ್ವಾಮೀಜಿ, ಅಧ್ಯಕ್ಷತೆ–ಕೇಂದ್ರ ಸಂಸದೀಯ ವ್ಯವಹಾರಗಳು, ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತಕುಮಾರ್, ಮಾಹಿತಿ ಕೇಂದ್ರ ಉದ್ಘಾಟನೆ–ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ್, ರಂಗೋಲಿ ಸ್ಪರ್ಧೆ ಉದ್ಘಾಟನೆ–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಉಮಾಶ್ರೀ, ಸಾಂಸ್ಕೃತಿಕ ಮೇಳ ಉದ್ಘಾಟನೆ– ಚಲನಚಿತ್ರ ಕಲಾವಿದ ಡಾ. ಶಿವರಾಜ್ ಕುಮಾರ್, ಸೋಬಾನೆ ಪದ ಸ್ಪರ್ಧೆ ಉದ್ಘಾಟನೆ–ಶಾಸಕಿ ತಾರಾ ಅನುರಾಧ, ಮುಖ್ಯ ಅತಿಥಿ–ಶಾಸಕ ಎಸ್. ಸುರೇಶ್ ಕುಮಾರ್, ವಿಧಾನಸಭಾ ಸದಸ್ಯ ಪಂಕಜ್ ಸಿಂಗ್, ಸ್ಥಳ: ಸುತ್ತೂರು ಕ್ಷೇತ್ರ,

- **ವಸ್ತು ಪ್ರದರ್ಶನ, ಕೃಷಿ ಮೇಳ ಉದ್ಘಾಟನೆ**

ಸಂಜೆ ೪ಕ್ಕೆ, ಜೆಎಸ್‌ಎಸ್ ಸುತ್ತೂರು ಜಾತ್ರಾ ಮಹೋತ್ಸವ, ಉಪಸ್ಥಿತಿ– ಶ್ರೀ ಕೆರೆಗೋಡಿ–ರಂಗಪುರ ಸುಕ್ಷೇತ್ರದ ಶ್ರೀ ಗುರುಪರದೇಶಿಕೇಂದ್ರ ಸ್ವಾಮೀಜಿ, ಶ್ರೀ ಹಂಪಿ ವಿರೂಪಾಕ್ಷ ಮಹಾಸಂಸ್ಥಾನ ಮಠದ ಶ್ರೀ ಶಂಕರಾಚಾರ್ಯ ವಿದ್ಯಾರಣ್ಯ ಭಾರತೀ ಸ್ವಾಮೀಜಿ, ವಸ್ತು ಪ್ರದರ್ಶನ ಉದ್ಘಾಟನೆ–ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ, ಅಧ್ಯಕ್ಷತೆ–ಶಾಸಕ ಡಾ. ಜಿ. ಪರಮೇಶ್ವರ, ಕೃಷಿ ಮೇಳ ಉದ್ಘಾಟನೆ–ಕೃಷಿ ಸಚಿವ ಕೃಷ್ಣ ಭೈರೇಗೌಡ, ಶೈಕ್ಷಣಿಕ ವಸ್ತು ಪ್ರದರ್ಶನ ಉದ್ಘಾಟನೆ–ಸಂಸದ ಕೆ.ಎಚ್.ಮುನಿಯಪ್ಪ, ಮುಖ್ಯ ಅತಿಥಿ–ಶಾಸಕ ಸಿ. ಪುಟ್ಟರಂಗಶೆಟ್ಟಿ, ಲೋಕಸಭಾ ಸದಸ್ಯ ಡಿ.ಕೆ. ಸುರೇಶ್, ಶಾಸಕ ಎಸ್.ಆರ್. ಪಾಟೀಲ್, ಸ್ಥಳ: ಸುತ್ತೂರು ಕ್ಷೇತ್ರ,

- **ಸಾಂಸ್ಕೃತಿಕ ಕಾರ್ಯಕ್ರಮ**

ಬೆಳಿಗ್ಗೆ ೮ಕ್ಕೆ, ನಾದಸ್ವರ, ೯ಕ್ಕೆ, ಸುಗಮ ಸಂಗೀತ–ಎಂ. ಬಸವರಾಜು ಮತ್ತು ವೃಂದ, ಸ್ಥಳ: ಗದ್ದುಗೆ ಆವರಣ. ಮಧ್ಯಾಹ್ನ ೨ಕ್ಕೆ, ಭಕ್ತಿ ಸಂಗೀತ–ರಾಣಿಬೆನ್ನೂರಿನ ಎಲ್. ರಜನಿ, ಸಂಜೆ ಭಕ್ತಿಗೀತೆಗಳು–ಬೆಂಗಳೂರಿನ ಡಾ. ಕೆ.ಎನ್. ಕೆ. ವೆಂಕಟರಮಣ, ಸಂಜೆ ೮ಕ್ಕೆ, ಶಹನಾಯ್ ವಾದನ, ಪಂ.ನಟರಾಜ್ ಜಿ. ಮಹಾಜನ್, ೯ಕ್ಕೆ, ರಾಮಧ್ಯಾನ ಪ್ರಕರಣ ನಾಟಕ ಪ್ರದರ್ಶನ, ಅಭಿನಯ–ಜೆ.ಪಿ.ನಗರದ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು, ೧೦ಕ್ಕೆ, ನಾಟಕಗಳು: ದಕ್ಷ ಯಜ್ಞ ನಾಟಕ ಪ್ರದರ್ಶನ–ಭೋಗಯ್ಯನಹುಂಡಿಯ ಶ್ರೀ ಬಸವೇಶ್ವರ ಕಲಾ ಸಂಘ, ಸ್ಥಳ: ಹಿರಿಯರ ಮನೆ ಆವರಣ. ಕುರುಕ್ಷೇತ್ರ ಅಥವಾ ಗದಾಯುದ್ಧ ನಾಟಕ ಪ್ರದರ್ಶನ–ಗೌರಿಶಂಕರ ನಗರದ ಶ್ರೀ ಚಾಮುಂಡೇಶ್ವರಿ ಕೃಪಾಪೋಷಿತ ನಾಟಕ ಮಂಡಳಿ, ಸ್ಥಳ: ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ. ಶ್ರೀ ಶನಿಪ್ರಭಾವ ಅಥವಾ ರಾಜಾವಿಕ್ರಮ ನಾಟಕ ಪ್ರದರ್ಶನ–ನಂಜನಗೂಡಿನ ವೆಂಕಟಾಚಲಪುರದ ಶ್ರೀ ಶನೀಶ್ವರಸ್ವಾಮಿ ಕಲಾತಂಡ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ.

ನಂಜನಗೂಡು ತಾಲ್ಲೂಕಿನಲ್ಲಿಂದು

- **ಕಾನೂನು ಅರಿವು-ನೆರವು**

ಬೆಳಿಗ್ಗೆ ೧೦.೩೦ಕ್ಕೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲ್ಲೂಕು ಕಾನೂನು ಸೇವಾ ಸಮಿತಿ ನಂಜನಗೂಡು, ವಕೀಲರ ಸಂಘ, ಉದ್ಘಾಟನೆ–ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಪಿ.ಜಿ.ಎಂ. ಪಾಟೀಲ್, ಮುಖ್ಯ ಅತಿಥಿ–ಸಿವಿಲ್ ನ್ಯಾಯಾಧೀಶ ಸಿ.ಜಿ. ಮೊಹಮದ್ ಮುಜೀರುಲ್ಲಾ, ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷ ಬೊಸಗೊಂಡ ಪಿ. ದೇವಮನೆ, ಅಧ್ಯಕ್ಷತೆ–ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ಅಧ್ಯಕ್ಷ ಎಂ. ನಂಜುಂಡಸ್ವಾಮಿ, ಸ್ಥಳ–ಸಮುದಾಯ ಭವನ, ಹದಿನಾರು ಗ್ರಾಮ,

ಮೈಸೂರು ಆಕಾಶವಾಣಿ

ಬೆಳಿಗ್ಗೆ ೬.೧೦ ಗೀತಾರಾಧನ, ೬.೩೦ ಜಿನ ಚಿಂತನ–ಡಾ. ಮೈಕೆಲ್, ೬.೪೫ ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಪ್ರಾಯೋಜಿತ ಕಾರ್ಯಕ್ರಮ, ವ್ಯಾಖ್ಯಾನಕಾರರು–ಡಾ.ಎಚ್.ಎಂ.ಕಲಾಶ್ರೀ ಗಾಯನ–ಎಂ.ಡಿ.ಸುಮತಿ ಮುರಾರಿ, ೭.೧೫ ಕಾನೂನಿನ ಅರಿವು, ೭.೩೦ ಸೇವಾವಾಹಿನಿ, ೮.೩೫ ಜಿನಸೌರಭ–ಜೈನ ತೀರ್ಥ ಕ್ಷೇತ್ರಗಳು–ನರಸಿಂಹರಾಜಪುರ, ಭಾಗವಹಿಸುವವರು–ಡಾ. ಜಯ ಪದ್ಮಕುಮಾರ್, ೮.೫೦ ಜಿನ ಸೌರಭ– ವಡ್ಡಾರಾಧನೆ, ೯.೦೫ ಚಿತ್ರಗೀತೆ, ೧೦.೦೦ ಓಲೇಟಿ ವೆಂಕಟೇಶ್ವರುಲು–ಹಾಡುಗಾರಿಕೆ, ೧೧.೦೦ ಕಾಮನ ಬಿಲ್ಲು–ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್.

ಮಧ್ಯಾಹ್ನ ೧೨.೦೦ ಮಕ್ಕಳ ಮಂಟಪ–ಪರಿಸರ ಸಂರಕ್ಷಣೆ ಕುರಿತು ಮಕ್ಕಳ ಅಭಿಪ್ರಾಯಗಳನ್ನಾಧರಿಸಿದ ಕಾರ್ಯಕ್ರಮ, ೧೨.೩೦ ಮಹಿಳಾರಂಗ– ನಾದಮಯೂರಿ ಭಜನಾ ಮಂಡಳಿಯ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ, ೧.೦೦ ದೇವರನಾಮ–ವೃಂದಗಾನ, ೧.೨೦ ಭಾವಗೀತೆ, ೧.೩೦ ಮಧ್ಯಾಹ್ನದ ಮಾಧುರ್ಯ, ೨.೧೫ ಹಿಂದಿ ಚಿತ್ರಗೀತೆ, ೨.೩೫ ಬಾನ್ ದನಿ–ಪೂರಕ ಶಿಕ್ಷಣ ಕಾರ್ಯಕ್ರಮ, ೩.೦೦ ವಿವಿಧ ಭಾರತಿ ಕಾರ್ಯಕ್ರಮಗಳು, ೩.೩೦ ಜನಪದಗೀತೆ–ಪಾರ್ವತಮ್ಮ ಮತ್ತು ತಂಡ–ತತ್ವಪದಗಳು.

ಸಂಜೆ ೫.೦೦ ಚಿತ್ರಗೀತೆ–ಕೆಂಪಮ್ಮ ಮತ್ತು ತಂಡ, ೫.೫೦ ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಪ್ರಾಯೋಜಿತ ಕಾರ್ಯಕ್ರಮ, ವ್ಯಾಖ್ಯಾನಕಾರರು–ಡಾ. ಎಚ್.ಎಂ. ಕಲಾಶ್ರೀ, ಗಾಯನ–ಎಂ.ಡಿ. ಸುಮತಿ ಮುರಾರಿ, ೬.೧೫ ಜನಪದಗೀತೆ–ಸ್ವಾಮಿಗೌಡ ಮತ್ತು ತಂಡ, ಬೋರಪ್ಪ ಮತ್ತು ತಂಡ, ೬.೫೦ ಕೃಷಿರಂಗ–ಕಿಸಾನ್ ವಾಣಿ–ಬಾನುಲಿ ಕೃಷಿಕ–ಸಾರ್ಥಕ ಕೇಳುಗರೊಂದಿಗೆ ಸಂವಾದ, ೭.೪೫ ಸಮಾಚಾರ ದರ್ಶನ ೮.೦೦ ಯುವವಾಣಿ–ಬಾನುಲಿ ರಸಪ್ರಶ್ನೆ–ಫೋನ್ ಇನ್ ಕಾರ್ಯಕ್ರಮ, ೯.೧೬ ನಿಮ್ಮ ಪತ್ರ, ಪ್ರಸ್ತುತಿ–ಡಾ. ಉಮೇಶ್, ೯.೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ರಾಜೇಂದ್ರ ಕುಲಕರ್ಣಿ–ವೇಣುವಾದನ.